# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 258 | Pages. 2 | Date: 26-09-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 258 - ಪುಟಗಳು : 2 | 26-09-2026 ಶನಿವಾರ | Ph: 8762954248 | ದರ : ₹1


# ಮಲೆನಾಡಿನಲ್ಲಿ ಮಳೆ-ಬಯಲು ಸೀಮೆಗೆ ಸೋನೆ

## ಸಕಲೇಶಪುರದಲ್ಲಿ ಹರ್ಷ ತಂದ ವರುಣ | ದಿನವಿಡಿ ಶೀತ ಗಾಳಿ-ಚಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಂಗಾರು ಮಳೆ ಕೈ ಕೊಟ್ಟಿರುವ ಹಿನ್ನೆಲೆ ಜಿಲ್ಲಾದ್ಯಂತ ಕೃಷಿ ಚಟುವಟಿಕೆ ಸಂಪೂರ್ಣ ಸ್ತಬ್ಧಗೊಂಡಿರುವುದು ಮಾತ್ರವಲ್ಲದೆ ಜನ ಜಾನುವಾರುಗಳ ಕುಡಿಯುವ ನೀರಿಗೆ ತತ್ವಾರ ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಶುಕ್ರವಾರ ಮಳೆಯ ಸಿಂಚನ ಶುರುವಾಗಿದ್ದು ಸಾರ್ವಜನಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಹಾಸನ, ಸಕಲೇಶಪುರ, ಬೇಲೂರು, ಆಲೂರು ವ್ಯಾಪ್ತಿಯಲ್ಲಿ ಮಳೆ ಸುರಿದಿದ್ದು ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು, ಅರಸೀಕೆರೆ ಭಾಗದಲ್ಲಿ ಸೋನೆ ಸುರಿಯಿತು. ಬೆಳಿಗ್ಗೆಯಿಂದ ಮೋಡ ಮುಸುಕಿದ ವಾತಾವರಣ ನಿರ್ಮಾಣವಾಗಿ ಚಳಿ ಗಾಳಿ ಬೀಸಿತು. ಹಾಸನದಲ್ಲಿ ಮಧ್ಯಾಹ್ನ 1.30 ರಿಂದ 3 ಗಂಟೆ ವರೆಗೆ ಹಾಗೂ ಸಂಜೆ 6 ರಿಂದ ರಾತ್ರಿ 8ರ ವರೆಗೆ ಜಿಟಿಜಿಟಿ ಮಳೆ ಸುರಿಯಿತು. ಬೇಲೂರಿನ ಬಿಕ್ಕೋಡು, ಅರೇಹಳ್ಳಿ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ವಾಯುಭಾರ ಕುಸಿತದ ಪರಿಣಾಮ ಕಳೆದ ಎರಡು ದಿನಗಳಿಂದ ಸಕಲೇಶಪುರ ತಾಲ್ಲೂಕಿನಲ್ಲಿ ಸೋನೆ ಮಳೆಯಂತೆ ಸುರಿಯುತ್ತಿದ್ದ ಮಳೆ ಶುಕ್ರವಾರ ಸಂಜೆ ಬಳಿಕ ಬಿರುಸುಗೊಂಡು ಎಡಬಿಡದೆ ಸುರಿಯುತ್ತಿದೆ. ಮುಂಗಾರು ಮಳೆಯ ಕೊರತೆಯಿಂದ ಆತಂಕದಲ್ಲಿದ್ದ ಬೆಳೆಗಾರರಲ್ಲಿ ಇದೀಗ ಕೊಂಚ ನೆಮ್ಮದಿ ಮೂಡಿಸಿದೆ.



ಈ ಬಾರಿ ಮುಂಗಾರು ನಿರೀಕ್ಷಿತ ಪ್ರಮಾಣದಲ್ಲಿ ಕೈಕೊಟ್ಟ ಪರಿಣಾಮ ತಾಲ್ಲೂಕಿನಲ್ಲಿ ನೀರಿನ ಕೊರತೆಯ ಆತಂಕ ಎದುರಾಗಿತ್ತು. ತಾಲ್ಲೂಕಿನಾದ್ಯಂತ ಸುಮಾರು 2,500 ಎಕರೆ ಪ್ರದೇಶದಲ್ಲಿ ಭತ್ತ ನಾಟಿ ಮಾಡಲಾಗಿದ್ದು, ಈ ಪೈಕಿ ಸುಮಾರು 500 ಎಕರೆ ಪ್ರದೇಶಕ್ಕೆ ನೀರಿನ ಅಗತ್ಯತೆ ಹೆಚ್ಚಾಗಿತ್ತು. ಮಳೆ ಕೊರತೆಯಿಂದ ಭತ್ತದ ಬೆಳೆಗೆ ನೀರು ಒದಗಿಸುವುದು ಬೆಳೆಗಾರರಿಗೆ ಸವಾಲಾಗಿತ್ತು.

ಕಾಫಿ ತೋಟಗಳಲ್ಲಿಯೂ ತೇವಾಂಶದ ಕೊರತೆ ಕಂಡುಬಂದಿತ್ತು. ವಿಶೇಷವಾಗಿ ಮೆಣಸು ಬಳ್ಳಿಗಳಲ್ಲಿ ಕಾಯಿ ಕಟ್ಟುವ ಹಂತವಾಗಿರುವುದರಿಂದ ಈ ಸಂದರ್ಭದಲ್ಲಿ ತೋಟಗಳಿಗೆ ನೀರಿನ ಅಗತ್ಯತೆ ಹೆಚ್ಚಾಗಿದೆ. ಇದೀಗ ಸೆಪ್ಟೆಂಬರ್ ಅಂತ್ಯದಲ್ಲಿ ಮಳೆ ಚುರುಕುಗೊಂಡಿರುವುದು ಕಾಫಿ ಹಾಗು ಮೆಣಸು ಬೆಳೆಗಾರರಿಗೆ ಸಮಾಧಾನ ತರಿಸಿದೆ.

ಕಳೆದ ಎರಡು ದಿನಗಳಿಂದ ತುಂತುರು ಹಾಗೂ ಸಾಧಾರಣ ಮಳೆಯಾಗುತ್ತಿದ್ದರೂ, ಶುಕ್ರವಾರ ಸಂಜೆ ಬಳಿಕ ಮಳೆಯ ಬಿರುಸು ಹೆಚ್ಚಾಗಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ತೋಟಗಳು ಹಾಗು ಕೃಷಿ ಭೂಮಿಯಲ್ಲಿ ತೇವಾಂಶ ಹೆಚ್ಚಾಗುತ್ತಿದ್ದು, ಬೆಳೆಗಳಿಗೆ ಅಗತ್ಯವಿರುವ ನೀರಿನ ಕೊರತೆ ನೀಗುವ ನಿರೀಕ್ಷೆ ಬೆಳೆಗಾರರಲ್ಲಿ ಮೂಡಿದೆ.

ಮುಂಗಾರು ಕೈಕೊಟ್ಟ ಹಿನ್ನಲೆಯಲ್ಲಿ ನೀರಿನ ಲಭ್ಯತೆ ಕುರಿತು ಆತಂಕದಲ್ಲಿದ್ದ ಬೆಳೆಗಾರರಿಗೆ ಬೆಳೆಗಳ ಅಗತ್ಯದ ಸಂದರ್ಭದಲ್ಲಿ ಸುರಿಯುತ್ತಿರುವ ಮಳೆ ಆಶಾಭಾವನೆ ಮೂಡಿಸಿದೆ. ಅದರಲ್ಲೂ ಭತ್ತದ ಬೆಳೆಗೆ ನೀರಿನ ಅಗತ್ಯವಿದ್ದ ಸಂದರ್ಭ ಹಾಗು ಕಾಫಿ ತೋಟಗಳಲ್ಲಿ ಮೆಣಸು ಬಳ್ಳಿ ಕಾಯಿ ಕಟ್ಟುತ್ತಿರುವ ಹಂತದಲ್ಲಿ ಮಳೆ ಬಂದಿರುವುದು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

### ಮೋಡ ಮುಸುಕಿದ ವಾತಾವರಣ

ಅರಕಲಗೂಡು ತಾಲ್ಲೂಕಿನಲ್ಲಿ ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಒಣಗುತ್ತಿರುವ ಬೆಳೆಗಳಿಗೆ ಜೀವಜಲದ ನಿರೀಕ್ಷೆಯಲ್ಲಿದ್ದ ರೈತರಿಗೆ ಶುಕ್ರವಾರವೂ ವರುಣ ನಿರಾಸೆ ಮೂಡಿಸಿದ. ಗುರುವಾರ ಸಂಜೆಯಿಂದ ಆಕಾಶದಲ್ಲಿ ಮೋಡ ಮುಸುಕಿದ ವಾತಾವರಣ ಕಂಡುಬಂದರೂ, ಮಳೆ ಸುರಿಯದೆ ರೈತರ ಆತಂಕ ಮತ್ತಷ್ಟು ಹೆಚ್ಚಾಗಿದೆ.

ಗುರುವಾರ ಸಂಜೆ ಅಲ್ಲಲ್ಲಿ ಬಿಟ್ಟು ಬಿಟ್ಟು ಮಳೆ ಉದುರಿದರೆ, ಶುಕ್ರವಾರ ಬೆಳಗ್ಗೆಯೂ ತಾಲ್ಲೂಕಿನ ಹಲವೆಡೆ ಜಿಟಿಜಿಟಿ ಮಳೆಯಾಯಿತು. ಕೇವಲ ತುಂತುರು ಮಳೆಗೆ ಸೀಮಿತವಾದ ಪರಿಣಾಮ, ಒಣಗುತ್ತಿರುವ ಬೆಳೆಗಳಿಗೆ ಯಾವುದೇ ಪ್ರಯೋಜನವಾಗಲಿಲ್ಲ. ತಾಲೂಕಿನಲ್ಲಿ ಭೀಕರ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆ ಕೊರತೆಯಿಂದ ಈಗಾಗಲೇ ಬಿತ್ತನೆ ಮಾಡಿರುವ ವಿವಿಧ ಬೆಳೆಗಳು ಒಣಗಲಾರಂಭಿಸಿವೆ. ಜಮೀನುಗಳಲ್ಲಿ ತೇವಾಂಶದ ಕೊರತೆ ಉಂಟಾಗಿದ್ದು, ಬೆಳೆಗಳು ಕೈಕೊಡುವ ಆತಂಕ ರೈತರನ್ನು ಕಾಡುತ್ತಿದೆ.

# 6 ದಿನಗಳ ಆನಂದದ ಅನುಭೂತಿ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರ್ಟ್ ಆಫ್ ಲಿವಿಂಗ್ ಮತ್ತು ರೋಟರಿ ಕ್ಲಬ್ ಆಫ್ ಕ್ವಾಂಟಾ ಹಾಸನ ಆಶ್ರಯದಲ್ಲಿ ಸೆ.28 ರಿಂದ ಅ.3 ರ ವರೆಗೆ ಆನಂದದ ಅನುಭೂತಿ ಶಿಬಿರ, ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಸುದರ್ಶನ ಕ್ರಿಯೆ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಕ್ವಾಂಟಾ ಅಧ್ಯಕ್ಷ ಹಾಗೂ ಹಾಸನಾಂಬ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ಎನ್.ಬಸವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಮಾನಸಿಕ ಒತ್ತಡ, ಆತಂಕ ಇವುಗಳಿಂದ ಮುಕ್ತಿ ಪಡೆಯಲು ಮತ್ತು ಆರೋಗ್ಯ ಸುಧಾರಣೆ, ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ವಿಶ್ವ ಪ್ರಸಿದ್ಧ ಸುದರ್ಶನ ಕ್ರಿಯೆ ಕಲಿಯುವ ಸುವರ್ಣಾವಕಾಶ ಕಲ್ಪಿಸಲಾಗಿದೆ ಎಂದರು.

ಒಟ್ಟು ಆರು ದಿನಗಳ ಕಾಲ ನಗರದ ರವೀಂದ್ರ ನಗರದ ರಾಘವೇಂದ್ರ ಮಠದ ರಸ್ತೆಯ ಶ್ರೀ ಯೋಗಿ ನಾರಾಯಣ ಸಮುದಾಯ ಭವನದಲ್ಲಿ ಶಿಬಿಯ ನಡೆಯಲಿದೆ. ಮೊದಲ ಬ್ಯಾಚ್ ಬೆಳಗ್ಗೆ 5.30 ರಿಂದ 8 ಗಂಟೆವರೆಗೆ, 2ನೇ ಬ್ಯಾಚ್ ಬೆಳಗ್ಗೆ 11 ರಿಂದ ಮಧ್ಯಾಹ್ನ 1.30 ಹಾಗೂ 3ನೇ ಬ್ಯಾಚ್ ಸಂಜೆ 6 ಗಂಟೆಯಿಂದ ರಾತ್ರಿ 8.30 ರವರೆಗೆ ನಡೆಯಲಿದೆ.

ಸಾರ್ವಜನಿಕರು ತಮಗೆ ಅನುಕೂಲವಾದ ಸಮಯಕ್ಕೆ ಬರಬಹುದು. 9845173779, 9686656871, 9448462646 ಈ ನಂಬರ್ ಅಥವಾ ಆನ್‌ಲೈನ್ ಮೂಲಕವೂ ನೋಂದಣಿ ಮಾಡಿಕೊಳ್ಳಬಹುದು ಎಂದರು.

ಸುದರ್ಶನ ಕ್ರಿಯೆಯಿಂದ ಭಾವನೆಗಳ ನಿಯಂತ್ರಣ, ಮೆದುಳಿನ ಕಾರ್ಯಕ್ಷಮತೆ, ಸೃಜನಶೀಲತೆ ಮತ್ತು ಕ್ರಿಯಾಶೀಲತೆ ಹೆಚ್ಚಳ, ಸರಿ-ತಪ್ಪು ನಿರ್ಧರಿಸುವ ಸಾಮರ್ಥ್ಯ, ರಕ್ತದ ಒತ್ತಡದಲ್ಲಿ ಸಮತೋಲನ, ಮನಸ್ಸಿನ ಚಂಚಲತೆ ಕಡಿಮೆ ಹೀಗೆ ಹಲವು ರೀತಿಯ ಉಪಯೋಗ ಇರಲಿದೆ ಎಂದರು.

ಯೋಗ ಶಾಲೆಯ ಶಿಕ್ಷಕ ಪರಮೇಶ್ವರಪ್ಪ, ಹೆಚ್.ಎಲ್.ವಿದ್ಯಾ, ಶಿಬಿರದ ಪ್ರಾಯೋಜಕರು, ಮಾನವ ಹಕ್ಕುಗಳ ಒಕ್ಕೂಟ ಜಿಲ್ಲಾ ಘಟಕದ ಪ್ರಭಾರ ಅಧ್ಯಕ್ಷ ಜಿ.ಕುಮಾರ್, ಅರುಣ್, ರೋಟರಿ ಕ್ಲಬ್ ಆಫ್ ಕ್ವಾಂಟಾ ಕಾರ್ಯದರ್ಶಿ ಯತೀಶ್, ಖಜಾಂಚಿ ಡಾ.ಹೇಮಂತ್ ಕುಮಾರ್ ಇದ್ದರು.

# ಸೆ. 27ಕ್ಕೆ ವೀರಶೈವ ಲಿಂಗಾಯತ ಮಹಾಸಭಾ ಪದಗ್ರಹಣ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ತಾಲ್ಲೂಕು ಘಟಕ ಹಾಗೂ ಮಹಿಳಾ ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಸೆ.27ರಂದು ಬೆಳಿಗ್ಗೆ 10.30ಕ್ಕೆ ಪಟ್ಟಣದ ಬ್ಯಾಕರವಳ್ಳಿ ಶ್ರೀ ಗುರುವರ ಕಲ್ಯಾಣ ಮಂದಿರದಲ್ಲಿ ನಡೆಯಲಿದೆ ಎಂದು ತಾಲ್ಲೂಕು ಘಟಕದ ನಿಯೋಜಿತ ಅಧ್ಯಕ್ಷ ಎಸ್.ಸಿ. ದಿನೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸಾದ್, ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದ್ರೋಳೆ ಹಾಗೂ ಕಾರ್ಯದರ್ಶಿ ನಟರಾಜ್ ಸ್ವಾಮಿ ಅವರ ನೇತೃತ್ವದಲ್ಲಿ ದೇಶದಾದ್ಯಂತ ಸಂಘಟನಾ ಹಾಗೂ ಸಮಾಜಮುಖಿ ಚಟುವಟಿಕೆಗಳು ನಡೆಯುತ್ತಿವೆ. ಸಕಲೇಶಪುರ ತಾಲ್ಲೂಕಿನಲ್ಲಿಯೂ ಕಳೆದ 15 ವರ್ಷಗಳಿಂದ ಮಹಾಸಭೆಯ ಘಟಕ ವಿವಿಧ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಮಹಿಳಾ ಘಟಕವು ಸುಮಾರು 10 ವರ್ಷಗಳಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಇತ್ತೀಚೆಗೆ ನಡೆದ ಚುನಾವಣೆಯ ಬಳಿಕ ತಾಲ್ಲೂಕು ಹಾಗೂ ಮಹಿಳಾ ಘಟಕಗಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಪದಗ್ರಹಣ ಸಮಾರಂಭದಲ್ಲಿ ಮಹಾಸಭೆಯ ಸಂಘಟನೆಯ ಉದ್ದೇಶ, ಸಮಾಜದ ಅಭಿವೃದ್ಧಿಗಾಗಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಹಾಗೂ ವಿವಿಧ ಸಮಾಜಮುಖಿ ಯೋಜನೆಗಳ ಕುರಿತು ರಾಜ್ಯ ಪ್ರಧಾನ ಕಾರ್ಯದರ್ಶಿ ನಟರಾಜ್ ಸ್ವಾಮಿ ಮಾಹಿತಿ ನೀಡಲಿದ್ದಾರೆ. ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ದಿನೇಶ್ ಮನವಿ ಮಾಡಿದರು.

ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ಚೈತ್ರ ನವೀನ್ ಮಾತನಾಡಿ, ಕಾರ್ಯಕ್ರಮದ ಮಾಹಿತಿ ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಉದ್ದೇಶದಿಂದ 21 ಜನರ ತಂಡ ರಚಿಸಲಾಗಿದೆ. ತಂಡದ ಸದಸ್ಯರು ಸಮಾಜದ ಬಾಂಧವರಿಗೆ ದೂರವಾಣಿ ಮೂಲಕ ವೈಯಕ್ತಿಕವಾಗಿ ಆಹ್ವಾನ ನೀಡುತ್ತಿದ್ದಾರೆ. ಸಂಪರ್ಕ ಸಾಧ್ಯವಾಗದವರನ್ನು ಮತ್ತೊಮ್ಮೆ ಸಂಪರ್ಕಿಸಿ ಕಾರ್ಯಕ್ರಮದ ಮಾಹಿತಿ ನೀಡಲಾಗುವುದು ಎಂದು ಹೇಳಿದರು.

ತಾಲ್ಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಚಂದ್ರಶೇಖರ್, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ದೀಪಾ ಪರಮೇಶ್, ಮಹಿಳಾ ಘಟಕದ ಸುಮಾ ಕುಮಾರ್ ಹಾಗೂ ತಾಲ್ಲೂಕು ವೀರಶೈವ ಘಟಕದ ಅಧ್ಯಕ್ಷ ಎನ್.ಸಿ. ರಾಮಚಂದ್ರ ಉಪಸ್ಥಿತರಿದ್ದರು.

# ಸ್ಥಳೀಯರ ಹಿತಾಸಕ್ತಿಯೊಂದಿಗೆ ವರದಿ ಜಾರಿಯಾಗಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಕಸ್ತೂರಿ ರಂಗನ್ ವರದಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ನಮ್ಮ ಸ್ವಾರ್ಥಕ್ಕಾಗಿ ಪಶ್ಚಿಮ ಘಟ್ಟಗಳ ಪರಿಸರ ವ್ಯವಸ್ಥೆ ಬಲಿ ಕೊಡಬಾರದು ಎಂದು ಪರಿಸರ ಹೋರಾಟಗಾರ ಹುರಡಿ ವಿಕ್ರಮ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಪಶ್ಚಿಮ ಘಟ್ಟಗಳನ್ನು ದಕ್ಷಿಣ ಭಾರತದ ನೀರಿನ ಟ್ಯಾಂಕ್ ಎಂದೇ ಕರೆಯಬಹುದು. ದಕ್ಷಿಣ ಭಾರತದ ಪ್ರಮುಖ ನದಿಗಳ ಉಗಮಕ್ಕೆ ಪಶ್ಚಿಮ ಘಟ್ಟಗಳು ಆಧಾರವಾಗಿದ್ದು, ನೈರುತ್ಯ ಮಾರುತಗಳನ್ನು ತಡೆದು ಮಳೆಯಾಗುವಂತೆ ಮಾಡುವ ಮೂಲಕ ದೇಶದ ಕೃಷಿ ಹಾಗೂ ಜಲ ಸಂಪನ್ಮೂಲಕ್ಕೆ ಮಹತ್ವದ ಕೊಡುಗೆ ನೀಡುತ್ತಿವೆ ಎಂದರು.

ಪಶ್ಚಿಮ ಘಟ್ಟಗಳಲ್ಲಿ ಸಾವಿರಾರು ಸಸ್ಯ ಹಾಗೂ ಜೀವ ಸಂಕುಲಗಳು ನೆಲೆಸಿವೆ. ಹೀಗಾಗಿ ಅಭಿವೃದ್ಧಿ ಹೆಸರಿನಲ್ಲಿ ಪರಿಸರ ವ್ಯವಸ್ಥೆಗೆ ಧಕ್ಕೆ ತರುವ ಚಟುವಟಿಕೆಗಳಿಗೆ ಕಡಿವಾಣ ಹಾಕುವುದು ಅಗತ್ಯ ಎಂದು ಹೇಳಿದರು.

ಕಸ್ತೂರಿ ರಂಗನ್ ವರದಿಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಗಣಿಗಾರಿಕೆ, ಮರಳುಗಾರಿಕೆ ಹಾಗೂ ಕಲ್ಲುಕ್ವಾರಿ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಶಿಫಾರಸು ಮಾಡಲಾಗಿದೆ.




ಪರಿಸರಕ್ಕೆ ಹೆಚ್ಚಿನ ಮಾಲಿನ್ಯ ಉಂಟುಮಾಡುವ ರೆಡ್ ಕೆಟಗರಿ ಕೈಗಾರಿಕೆಗಳಿಗೆ ಅವಕಾಶ ನೀಡಬಾರದು. ಉಷ್ಣ ವಿದ್ಯುತ್ ಸ್ಥಾವರಗಳ ಸ್ಥಾಪನೆಗೂ ನಿರ್ಬಂಧ ವಿಧಿಸುವಂತೆ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಹೊಸ ದೊಡ್ಡ ಪ್ರಮಾಣದ ನಿರ್ಮಾಣ ಚಟುವಟಿಕೆಗಳು, ಹೊಸ ರಸ್ತೆಗಳ ನಿರ್ಮಾಣ ಸೇರಿ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುವ ಯೋಜನೆಗಳಿಗೆ ನಿಯಂತ್ರಣ ಅಗತ್ಯ. ಆದರೆ ಶಾಲೆ, ಆಸ್ಪತ್ರೆ ಹಾಗೂ ಸ್ಥಳೀಯ ಅಗತ್ಯಗಳಿಗೆ ಬೇಕಾದ ಸಣ್ಣ ಕಟ್ಟಡಗಳನ್ನು ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಿರ್ಮಿಸಲು ಅವಕಾಶವಿದೆ. ಕಾಫಿ, ಅಡಿಕೆ ಹಾಗೂ ರಬ್ಬರ್‌ನಂತಹ ತೋಟಗಾರಿಕಾ ಚಟುವಟಿಕೆಗಳನ್ನು ಮುಂದುವರಿಸಬಹುದಾದರೂ ಅವುಗಳಿಂದ ಪರಿಸರಕ್ಕೆ ಹಾನಿಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

### ಮರ ಹನನ-ತನಿಖೆಗೆ ಆಗ್ರಹ

ಹಾನುಬಾಳು ಹೋಬಳಿಯ ಅಗನಿ ಗ್ರಾಮದ ಮೂರುಕಣ್ಣು ಬೆಟ್ಟದ ಅರಣ್ಯ ಪ್ರದೇಶದ, ವಿಚಾರ ಪ್ರಸ್ತಾಪಿಸಿ, 1920ರಲ್ಲಿ 7,936 ಎಕರೆ ಪ್ರದೇಶವನ್ನು ಮೂರುಕಣ್ಣು ಬೆಟ್ಟ ರಿಸರ್ವ್ ಫಾರೆಸ್ಟ್ ಎಂದು ಘೋಷಿಸಿ, ನಂತರ ರದ್ದುಪಡಿಸಿತ್ತು. ಮೂರುಕಣ್ಣು ಬೆಟ್ಟಕ್ಕೆ ಸಂಬಂಧಿಸಿದ ಸೆಕ್ಷನ್4 ಅರಣ್ಯ ಪ್ರದೇಶದಲ್ಲಿ ಐದು ಗ್ರಾಮಗಳ ಜನರು ವಾಸಿಸುತ್ತಿದ್ದು, ಅವರ ಸ್ಥಳಾಂತರಕ್ಕೆ ಹುನ್ನಾರ ನಡೆದಿದೆ ಎಂದು ದೂರಿದರು. 1920ಕ್ಕೂ ಹಿಂದಿನ ದಾಖಲೆ ಹೊಂದಿರುವ ಭೂಮಿಯನ್ನಷ್ಟೇ ಕಾನೂನುಬದ್ಧವೆಂದು ಪರಿಗಣಿಸಲಾಗುತ್ತಿದೆ ಎಂಬುದು ಗ್ರಾಮಸ್ಥರಲ್ಲಿ ಆತಂಕಕ್ಕೆ ಕಾರಣವಾಗಿದೆ. ದಶಕಗಳಿಂದ ಇಲ್ಲಿ ವಾಸಿಸುತ್ತಿರುವ ಜನರ ಭೂಮಿ, ಮನೆ ಹಾಗೂ ಜೀವನೋಪಾಯದ ವಿಚಾರದಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಮೊದಲು ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ಕಾನೂನುಬದ್ಧ ಪ್ರಕ್ರಿಯೆ ಅನುಸರಿಸಬೇಕು ಎಂದು ಆಗ್ರಹಿಸಿದರು.

ಅಣೆಕಟ್ಟು ಹಾಗೂ ಜಲ ಯೋಜನೆಗಳ ಸಂದರ್ಭದಲ್ಲಿಯೂ ನದಿಯ ನೈಸರ್ಗಿಕ ಹರಿವನ್ನು ಸಂಪೂರ್ಣವಾಗಿ ತಡೆಯದೆ ನಿರ್ದಿಷ್ಟ ಪ್ರಮಾಣದ ನೀರನ್ನು ನದಿಗೆ ಬಿಡುವಂತಹ ಪರಿಸರ ಸಂರಕ್ಷಣಾ ಕ್ರಮ ಅನುಸರಿಸಬೇಕು ಎಂದು ಒತ್ತಾಯಿಸಿದರು.

# ಕರ್ನಾಟಕದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು: ಪೊಲೀಸರ ಅಲರ್ಟ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚಿಕ್ಕಬಳ್ಳಾಪುರ/ಅರಕಲಗೂಡು: ರಾಜ್ಯದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಸಂಚು ರೂಪಿಸಿದ ಗಂಭೀರ ಆರೋಪದ ಹಿನ್ನೆಲೆಯಲ್ಲಿ ಇಬ್ಬರು ಶಂಕಿತರನ್ನು ರಾಜ್ಯ ಗುಪ್ತಚರ ಇಲಾಖೆ ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಬಂಧಿತರನ್ನು ಚಿಕ್ಕಬಳ್ಳಾಪುರ ಮೂಲದ ಶಬ್ಬೀರ್ ಹಾಗೂ ಉತ್ತರ ಭಾರತದ ಬಿಹಾರ ಮೂಲದ ಸಲಾಮಿನ್ (25) ಎಂದು ಗುರುತಿಸಲಾಗಿದೆ. ಈ ಇಬ್ಬರು ಟೆಲಿಗ್ರಾಂ ಆ್ಯಪ್‌ನ ಟಿಕ್ಲೋಸ್ಡ್ ಗ್ರೂಪ್‌ಟಿ (ಖಾಸಗಿ ಗುಂಪು) ಒಂದರಲ್ಲಿ ಪ್ರಚೋದನಕಾರಿ ವಿಚಾರಗಳು ಹಾಗೂ ಭಯೋತ್ಪಾದನೆಗೆ ಸಂಬಂಧಿಸಿದ ಚರ್ಚೆಗಳನ್ನು ನಡೆಸುತ್ತಿದ್ದರು ಎಂಬ ಆಘಾತಕಾರಿ ಮಾಹಿತಿ ಪ್ರಾಥಮಿಕ ತನಿಖೆಯಿಂದ ಬಹಿರಂಗವಾಗಿದೆ.

ರಾಜ್ಯ ಗುಪ್ತಚರ ಇಲಾಖೆಯ ಮಾಹಿತಿಯ ಮೇರೆಗೆ ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಮೊದಲು ಶಬ್ಬೀರ್‌ನನ್ನು ವಶಕ್ಕೆ ಪಡೆದರು. ಆತನ ಮೊಬೈಲ್ ಪರಿಶೀಲನೆ ನಡೆಸಿದಾಗ ಬಿಹಾರ ಮೂಲದ ಸಲಾಮಿನ್ ಎಂಬುವವನ ಸಂಪರ್ಕ ಪತ್ತೆಯಾಗಿದೆ. ಶಬ್ಬೀರ್ ನೀಡಿದ ಮಾಹಿತಿ ಹಾಗೂ ಮೊಬೈಲ್ ನೆಟ್‌ವರ್ಕ್ ಜಾಡು ಹಿಡಿದು ಪೊಲೀಸರು ಕಾರ್ಯಾಚರಣೆ ಚುರುಕುಗೊಳಿಸಿದರು.

ಸಲಾಮಿನ್ ತನ್ನ ಅಣ್ಣನ ಜೊತೆ ಹಾವೇರಿ ಜಿಲ್ಲೆಯಲ್ಲಿ ರಸ್ತೆ ಕಾಮಗಾರಿ ಕೆಲಸ ಮಾಡುತ್ತಿದ್ದ. ಮಂಗಳವಾರ ಅಲ್ಲಿನ ಕಾಮಗಾರಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಗುತ್ತಿಗೆದಾರನು ಆತನನ್ನು ಬುಧವಾರ ಅರಕಲಗೂಡಿನ ರಸ್ತೆ ಕಾಮಗಾರಿಗೆ ಕಳುಹಿಸಿದ್ದನು. ಈ ನಿಖರ ಮಾಹಿತಿ ಆಧರಿಸಿ ಅರಕಲಗೂಡಿಗೆ ಆಗಮಿಸಿದ ಪೊಲೀಸರ ತಂಡ,

2ನೇ ಪುಟಕ್ಕೆ ....

# ಕ್ರಾಫರ್ಡ್ ಆಸ್ಪತ್ರೆಗೆ ಸ್ಕ್ಯಾನಿಂಗ್ ಯಂತ್ರ ಕೊಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನಗರದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ತುರ್ತಾಗಿ ಹೊಸ ಸ್ಕ್ಯಾನಿಂಗ್ ಯಂತ್ರ ಒದಗಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಆರೋಗ್ಯ ಸಚಿವ ಯು.ಟಿ. ಖಾದರ್ ಅವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ಸಚಿವರನ್ನು ಭೇಟಿ ಮಾಡಿದ ಅವರು, ಸಕಲೇಶಪುರ-ಆಲೂರು-ಕಟ್ಟಾಯ ವಿಧಾನಸಭಾ ಕ್ಷೇತ್ರದ ಪ್ರಮುಖ ಸರ್ಕಾರಿ ಆರೋಗ್ಯ ಕೇಂದ್ರವಾಗಿರುವ ಕ್ರಾಫರ್ಡ್ ಆಸ್ಪತ್ರೆಯನ್ನು ತಾಲ್ಲೂಕು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ಜನರು ಅವಲಂಬಿಸಿದ್ದಾರೆ. ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು, ಗರ್ಭಿಣಿಯರು, ಹಿರಿಯ ನಾಗರಿಕರು ಹಾಗೂ ಮಕ್ಕಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಆಗಮಿಸುತ್ತಿದ್ದಾರೆ. ಆದರೆ ಅಗತ್ಯ ಸ್ಕ್ಯಾನಿಂಗ್ ಸೌಲಭ್ಯ ಇಲ್ಲದಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಶಾಸಕರು ಸಚಿವರ ಗಮನಕ್ಕೆ ತಂದರು.

ವೈದ್ಯಕೀಯ ಪರೀಕ್ಷೆ ಹಾಗೂ ಮುಂದಿನ ಚಿಕಿತ್ಸೆಗೆ ಸ್ಕ್ಯಾನಿಂಗ್ ಅಗತ್ಯವಿರುವ ರೋಗಿಗಳು ಅನಿವಾರ್ಯವಾಗಿ ಖಾಸಗಿ ಸ್ಕ್ಯಾನಿಂಗ್ ಕೇಂದ್ರಗಳನ್ನು ಅವಲಂಬಿಸಬೇಕಾಗಿದೆ. ಇದರಿಂದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಬೀಳುತ್ತಿದೆ. ದೂರದ ಗ್ರಾಮೀಣ ಪ್ರದೇಶಗಳಿಂದ ಬರುವ ರೋಗಿಗಳು ಸ್ಕ್ಯಾನಿಂಗ್‌ಗಾಗಿ ಬೇರೆಡೆ ಅಲೆದಾಡಬೇಕಾದ ಪರಿಸ್ಥಿತಿಯೂ ಇದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.



ಈ ಸಮಸ್ಯೆಯನ್ನು ತುರ್ತು ಸಾರ್ವಜನಿಕ ಆರೋಗ್ಯದ ವಿಷಯವಾಗಿ ಪರಿಗಣಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು. ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ಶೀಘ್ರವಾಗಿ ಹೊಸ ಸ್ಕ್ಯಾನಿಂಗ್ ಯಂತ್ರವನ್ನು ಮಂಜೂರು ಮಾಡಿ ಅಳವಡಿಸುವ ಮೂಲಕ ಈ ಭಾಗದ ಜನರ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಆರೋಗ್ಯ ಸಚಿವರನ್ನು ಒತ್ತಾಯಿಸಿದರು.

# ಜೆಡಿಎಸ್ ಸಂಘಟಿಸುವ ಹೊಣೆಗಾರಿಕೆ ಇದೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪಕ್ಷವನ್ನು ಬೂತ್ ಮಟ್ಟದಿಂದ ಸದೃಢಗೊಳಿಸಲು ಅಗತ್ಯ ತಯಾರಿ ಮಾಡಿಕೊಳ್ಳಲಾಗುತ್ತಿದೆ ಎಂದು ಜೆಡಿಎಸ್ ನೂತನ ಜಿಲ್ಲಾ ಗೌರವಾಧ್ಯಕ್ಷ ಬಿ.ಎ.ಜಗನ್ನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಮುಂದಿನ ವರ್ಷ ಚುನಾವಣೆಗಳ ವರ್ಷವಾಗಿದ್ದು, ವರಿಷ್ಠರು ದೊಡ್ಡ ಜವಾಬ್ದಾರಿ ವಹಿಸಿದ್ದಾರೆ. ನಾಯಕರು ಸಹಕಾರ, ಪ್ರೋತ್ಸಾಹ ನೀಡಬೇಕು, ಪಕ್ಷ ಸಂಘಟನೆಗೆ ತಯಾರಿ ನಡೆಸಬೇಕೆಂದು ಕಾರ್ಯಕರ್ತರು ಮನವಿ ಮಾಡಿದ್ದರು. ನಾಯಕರು ನಮ್ಮನ್ನೆಲ್ಲಾ ಕರೆಸಿ ಮಾತುಕತೆ ನಡೆಸಿದರು. ಆ ಹಿನ್ನಲೆಯಲ್ಲಿ ಹಿರಿಯರು ಸಮಾಲೋಚನೆ ನಡೆಸಿ ಹೊಸ ತಂಡ ರಚಿಸಿದ್ದಾರೆ ಎಂದರು.

ಕಾರ್ಯಕರ್ತರಿಗೆ ಜವಾಬ್ದಾರಿ ನೀಡುವ ಉದ್ದೇಶದಿಂದ ಕೆಲಸ ಮಾಡುತ್ತೇವೆ. ಜೆಡಿಎಸ್ ಯಾವತ್ತಿಗೂ ಜಾತ್ಯಾತೀತವಾಗಿ ಇರಲಿದೆ. ಅಲ್ಪಸಂಖ್ಯಾತ ಘಟಕ ಹಾಗು ಮಹಿಳಾ ಘಟಕಗಳನ್ನು ಆರಂಭಿಸಲಾಗುತ್ತದೆ ಎಂದರು.

ರಾಷ್ಟ್ರ ಮಟ್ಟದಲ್ಲಿ ಜೆಡಿಎಸ್ ಪಕ್ಷವು ಎನ್‌ಡಿಎ ಜೊತೆಗೆ ಮೈತ್ರಿ ಮಾಡಿಕೊಂಡಿದೆ. ಜಿಲ್ಲಾ ಮಟ್ಟದಲ್ಲೂ ಅದೇ ವಾತಾವರಣ ಸೃಷ್ಟಿಯಾಗಬೇಕು. ಈ ನಿಟ್ಟನಲ್ಲಿ ಮುಂದಿನ ದಿನಗಳಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದೆಂದು ಹೇಳಿದರು.



ನೂತನ ಜಿಲ್ಲಾಧ್ಯಕ್ಷ ನಟರಾಜ್ ಐಸಾಮಿಗೌಡ ಮಾತನಾಡಿ, ಜಿಲ್ಲೆಯ ಹಿರಿಯರ ಸಹಕಾರದಿಂದ ಅವಕಾಶ ಸಿಕ್ಕಿದೆ. ಪಕ್ಷ ಕೊಟ್ಟಿರುವ ಜವಾಬ್ದಾರಿ ಸಮರ್ಥವಾಗಿ ನಿಬಾಯಿಸುತ್ತೇನೆಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯದರ್ಶಿ ಕ್ರಾಂತಿ ಮಾತನಾಡಿ, ಪಕ್ಷದ ವರಿಷ್ಠ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭವಾನಿ ರೇವಣ್ಣ, ಶಾಸಕರಾದ ಹೆಚ್.ಪಿ.ಸ್ವರೂಪ್, ಎ.ಮಂಜು, ಹೆಚ್.ಸಿ.ಬಾಲಕೃಷ್ಣ ಎಲ್ಲರೂ ಸೇರಿ ಹೊಸ ಸಮಿತಿ ರಚಿಸಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಜೆಡಿಎಸ್ ಜಿಲ್ಲಾ ಕಾರ್ಯದರ್ಶಿ ಹೆಚ್.ಎಲ್. ರಾಮಚಂದ್ರ, ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಮಾಧ್ಯಮ ವಕ್ತಾರ ರಘು ಹೊಂಗೆರೆ ಇದ್ದರು.

# ಸರ್ವೆ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿ ತೀವ್ರ ತರಾಟೆ

## ಪ್ರಜಾ ಸೇವಾ ಆಂದೋಲನ ಅರ್ಜಿ ವಿಲೇವಾರಿ ವಿಳಂಬ | ನಿರ್ಲಕ್ಷ್ಯ ಸಹಿಸಲ್ಲ ಎಂದು ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾರ್ವಜನಿಕರ ಕೆಲಸಗಳು ಸುಗಮವಾಗಿ ಆಗಬೇಕೆಂದು ಸರ್ಕಾರ ಪ್ರಜಾ ಸೇವಾ ಆಂದೋಲನ ಹಮ್ಮಿಕೊಂಡಿದೆ. ಸಲ್ಲಿಕೆಯಾದ ಅರ್ಜಿಗಳ ಕುರಿತು ಮಾಹಿತಿ ಇಟ್ಟುಕೊಳ್ಳದೇ ಏನು ಮಾಡುತ್ತಿದ್ದೀರಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸರ್ವೆ ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ಹಾಸನ ಮತ್ತು ಸಕಲೇಶಪುರ ಸರ್ವೆಯರ್‌ಗಳ ವಿರುದ್ಧ ಕಿಡಿ ಕಾರಿದರು. ಇತ್ತೀಚೆಗೆ ಸಕಲೇಶಪುರದಲ್ಲಿ ನಡೆದ ಪ್ರಜಾ ಸೇವಾ ಆಂದೋಲನದಲ್ಲಿ ಸರ್ವೆಗೆ ಸಂಬಂಧಿಸಿ 67 ಅರ್ಜಿ ಬಂದಿವೆ. ಆದರೆ ನೀವು 11 ಅರ್ಜಿಗಳು ಬಂದಿವೆ ಎನ್ನುತ್ತಿದ್ದೀರಿ. ತಾಲ್ಲೂಕು ಮಟ್ಟದ ಅಧಿಕಾರಿಯಾಗಿ ಡಿ ಗ್ರುಪ್ ನೌಕರರಂತೆ ವರ್ತಿಸುತ್ತಿದ್ದೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.

ಆಂದೋಲನದಲ್ಲಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿಗೆ ಮೊದಲ ಆದ್ಯತೆ ನೀಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ನಾನು ಹೇಳಿದ್ದೇವೆ. ಆದರೆ ಅದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಇದ್ದೀರಿ. ಇನ್ನೊಂದು ಪತ್ರ ಕಳುಹಿಸಿದ ಬಳಿಕ ಕ್ರಮ ಕೈಗೊಳ್ಳುವುದಾದರೆ ಸಭೆಯಲ್ಲಿ ನಾವು ಭಾಷಣ ಮಾಡಿದ್ದು ತಮಾಷೆಯೇ ಎಂದು ಖಾರವಾಗಿ ಪ್ರಶ್ನಿಸಿದರು.




ಕಾನೂನು ಬಾಹಿರವಾಗಿ ಕೆಲಸ ಮಾಡುವಂತೆ ನಿಮಗೆ ಹೇಳುತ್ತಿಲ್ಲ. ನಿಯಮ ಪ್ರಕಾರ ಕೆಲಸ ಮಾಡಿ ಎಂದು ಹೇಳಿದರೆ ಗಂಡಾಂತರ ಸೃಷ್ಟಿಸಿದ್ದೀರಿ. ದುರಸ್ತು, ಪೋಡಿ, ಮೋಜಿಣಿ ಮಾಡುವುದು ಅಸಾಧ್ಯ ಎನ್ನುವುದಾದರೆ ಅದಕ್ಕೆ ಕಾರಣ ಹೇಳಬೇಕು. ಏನೂ ಮಾಡದೆ ಸುಮ್ಮನಿದ್ದರೆ ನಾವು ಏನೆಂದು ತಿಳಿಯಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣ ಏನೆಂಬುದನ್ನು ಮೊದಲು ಅರಿಯಬೇಕು. ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು ನಿಮ್ಮ ಕೆಲಸ ಮಾಡಿಕೊಡಬೇಕಿಲ್ಲ. ತಾಲ್ಲೂಕು ಮಟ್ಟದ ಅಧಿಕಾರಿಗಳಾಗಿರುವ ನಿಮಗೂ ಜವಾಬ್ದಾರಿ ಇರುತ್ತದೆಂದರು. ಈ ವೇಳೆ ಉತ್ತರಿಸಲು ಮುಂದಾದ ಮಹಿಳಾ ಅಧಿಕಾರಿಯೊಬ್ಬರನ್ನು ತಡೆದ ಜಿಲ್ಲಾಧಿಕಾರಿ, ಮೊದಲು ಸಭೆಯಲ್ಲಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ತಿಳಿದಿಕೊಳ್ಳಿ ಎಂದು ಚಾಟಿ ಬೀಸಿದರು.

ಜನಸಂಪರ್ಕ ಸಭೆಯಂತಲ್ಲ ಪ್ರಜಾಸೇವೆ:

ಪ್ರತಿ ತಾಲ್ಲೂಕು, ಹೋಬಳಿ ಮಟ್ಟದಲ್ಲಿ ನಡೆಯುತ್ತಿರುವ ಪ್ರಜಾ ಸೇವಾ ಆಂದೋಲನವನ್ನು ಈ ಹಿಂದೆ ನಡೆಯುತ್ತಿದ್ದ ಜನಸಂಪರ್ಕ ಸಭೆಯಂತೆ ಪರಿಗಣಿಸಬಾರದು. ಇದನ್ನು ಎಲ್ಲಾ ಅಧಿಕಾರಿಗಳು ಮನದಟ್ಟು ಮಾಡಿಕೊಳ್ಳಬೇಕು. ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಎರಡು ತಿಂಗಳೊಳಗಾಗಿ ಆಗಲೇಬೇಕು. ಎಲ್ಲಾ ಅರ್ಜಿಗಳನ್ನು ಒಂದೇ ಎಂದು ಭಾವಿಸಬಾರದು. ಕಂದಾಯ, ಪಂಚಾಯತ್ ರಾಜ್ ಇಲಾಖೆ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಅರ್ಜಿಗಳ ವಿಲೇವಾರಿ ಕುರಿತು ನಿಗಾ ವಹಿಸಬೇಕೆಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ 916 ಕಂದಾಯ ಗ್ರಾಮಗಳಿವೆ. 58 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಗ್ರಾಮಗಳಲ್ಲಿ ಅಂದಾಜು 32 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಬಹುದು. ಕಳೆದ ವರ್ಷ ಕೇವಲ 42 ಗ್ರಾಮಗಳನ್ನು ಗುರುತಿಸಲಾಗಿತ್ತು. ನನ್ನ ಬಳಿ ಇರುವಷ್ಟು ಮಾಹಿತಿ ನೀವು ಹೊಂದಿಲ್ಲವೆಂದರೆ ಏನರ್ಥ ಎಂದು ತರಾಟೆಗೆ ತೆಗೆದುಕೊಂಡರು.

ಸಕಲೇಶಪುರ ಸಭೆಯಲ್ಲಿ ನಡೆದ ಪ್ರಮಾದ ಬೇರೆ ಎಲ್ಲಿಯೂ ಕಾಣಿಸಿಕೊಳ್ಳಬಾರದು. ಕರ್ತವ್ಯ ಲೋಪದಡಿ ಅಮಾನತುಗೊಂಡಿರುವ ಎಸ್.ಆರ್.ಮನು ಹಾಗೂ ಗಿರೀಶ್ ಅವರ ಜಾಗಕ್ಕೆ ಬೇರೆಯವರನ್ನು ನಿಯೋಜಿಸಬೇಕು. ಸರ್ಕಾರಿ ನೌಕರರಿಗೆ ಪ್ರತಿದಿನ ಸವಾಲುಗಳಿರುತ್ತವೆ. ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುವುದು ಸುಲಭವಲ್ಲ. ಇಷ್ಟೆಲ್ಲಾ ತಿಳಿಹೇಳಿದರೂ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಇತರರಿದ್ದರು.

# ಕ್ಯಾತನಹಳ್ಳಿ ಏತ ನೀರಾವರಿ ಅನುದಾನಕ್ಕೆ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ 2ನೇ ಹಂತದ ಕಾಮಗಾರಿಗೆ 70 ಕೋಟಿರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಿದರು.

ಹಾಸನ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ನೀರಿನ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಇದಕ್ಕಾಗಿ ಕ್ಯಾತನಹಳ್ಳಿ ಏತನೀರಾವರಿ ಯೋಜನೆ ಪ್ರಮುಖವಾಗಿದೆ. ಈಗಾಗಲೇ ಯೋಜನೆಯ ಮೊದಲ ಹಂತದ ಮೂಲಕ ಸುಮಾರು 13 ಗ್ರಾಮಗಳ 21 ಕೆರೆಗಳಿಗೆ ನೀರು ಹರಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಆ ಭಾಗದ ರೈತರಿಗೆ ನೀರಾವರಿ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರೆಯುವಂತಾಗಿದೆ ಎಂದು ಸದನದ ಗಮನಕ್ಕೆ ತಂದರು.

ಯೋಜನೆಯ ಎರಡನೇ ಹಂತಕ್ಕೆ 70 ಕೋಟಿರೂ. ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಂಡಲ್ಲಿ 37ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಲಿದೆ. ಇದರಿಂದ 5,685ಕ್ಕೂ ಅಧಿಕ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗಲಿದೆ. ಬರಗಾಲದ ಸಂದರ್ಭದಲ್ಲಿ ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಮಟ್ಟ ಸುಧಾರಿಸುವುದರ ಜೊತೆಗೆ ಕೃಷಿ ಚಟುವಟಿಕೆಗಳಿಗೂ ಅನುಕೂಲವಾಗಲಿದೆ ಎಂದು ವಿವರಿಸಿದರು.

ನೀರಾವರಿ ಸೌಲಭ್ಯ ವಿಸ್ತರಣೆಯಿಂದ ಮಳೆ ಆಧಾರಿತ ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಕೃಷಿ ಉಳಿಸಿಕೊಳ್ಳಲು ರೈತರು ಎದುರಿಸುತ್ತಿರುವ ಹೆಚ್ಚುವರಿ ಆರ್ಥಿಕ ಹೊರೆಯೂ ತಗ್ಗಲಿದೆ. ಹೀಗಾಗಿ ಕೇವಲ ಒಂದು ಯೋಜನೆಯ ಕಾಮಗಾರಿಯಾಗಿ ಪರಿಗಣಿಸದೆ, ರೈತರ ಬದುಕು ಮತ್ತು ಕೃಷಿಯ ಭವಿಷ್ಯಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಯಾಗಿ ಕ್ಯಾತನಹಳ್ಳಿ ಏತನೀರಾವರಿ ಯೋಜನೆಯ ಎರಡನೇ ಹಂತವನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು.



ಬರಪೀಡಿತ ಪರಿಸ್ಥಿತಿಯಲ್ಲಿ ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಕೃಷಿ ಭೂಮಿಗೆ ನೀರಾವರಿ ಕಲ್ಪಿಸುವುದು ತುರ್ತು ಅಗತ್ಯವಾಗಿದ್ದು, ವಿಳಂಬ ಮಾಡದೆ 70 ಕೋಟಿರೂ. ಬಿಡುಗಡೆ ಮಾಡಿ ಎರಡನೇ ಹಂತದ ಕಾಮಗಾರಿಯನ್ನು ಆರಂಭಿಸಬೇಕು ಎಂದು ಮನವಿ ಮಾಡಿದರು.

# ಕಲ್ಲು ಕ್ವಾರಿ ವಾಹನಗಳಿಂದ ತೊಂದರೆ: ಕರವೇ ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಟ್ಟಡ ನಿರ್ಮಾಣ ಮತ್ತಿತರ ಕಾಮಗಾರಿಗೆ ಕ್ವಾರಿ ಮತ್ತು ಕ್ರಷರ್‌ಗಳಿಂದ ಜಲ್ಲಿ ಕಲ್ಲು ಮತ್ತಿತರ ಸಾಮಾಗ್ರಿ ತುಂಬಿಕೊಂಡು ಬರುವ ಟಿಪ್ಪರ್‌ಗಳಿಂದ ಭಾರೀ ತೊಂದರೆಯಾಗುತ್ತಿದ್ದು, ಅದಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದಿಂದ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಲಾರಿ, ಟಿಪ್ಪರ್, ಟ್ರ್ಯಾಕ್ಟರ್ ವಾಹನಗಳು ಕ್ರಷರ್ ಪುಡಿ, ಎಂ.ಸ್ಯಾಂಡ್, ಜಲ್ಲಿಕಲ್ಲು, ಬೋಲ್ಡರ್ಸ್‌ಗಳನ್ನು ಸೂಕ್ತ ಮುಂಜಾಗ್ರತೆ ವಹಿಸದೆ ಸಾಗಿಸುತ್ತಿವೆ. ಅದರಿಂದ ಪಾದಚಾರಿಗಳು, ದ್ವಿಚಕ್ರ ಹಾಗೂ ಕಾರು ಚಾಲಕರು ರಸ್ತೆಯಲ್ಲಿ ಓಡಾಡಲು ತೊಂದರೆ ಅನುಭವಿಸುವಂತಾಗಿದೆ. ತಾಲ್ಲೂಕಿನ ಅನೇಕ ಕಡೆ ಈ ಕಾರಣಕ್ಕಾಗಿಯೇ ಅಪಘಾತಗಳು ಸಂಭವಿಸುತ್ತಿವೆ. ಕಲ್ಲು ಪುಡಿಗಳು ಕಾರಿನ ಗಾಜಿಗೆ ಬಿದ್ದು ಹಾನಿ ಸಂಭವಿಸುತ್ತಿದೆ ಎಂದರು.

ಒಂದು ವಾಹನಕ್ಕೆ ಇಷ್ಟೇ ಲೋಡ್ ತುಂಬಬೇಕೆಂಬ ನಿಯಮವಿದೆ. ತಾಲ್ಲೂಕಿನಲ್ಲಿ ಕಾನೂನು ಪಾಲನೆಯಾಗುತ್ತಿಲ್ಲ. ಅಧಿಕಾರಿಗಳು ಈ ನಿಟ್ಟಿನಲ್ಲಿ ಜಾಣ ಮೌನ ವಹಿಸಿದ್ದಾರೆ. ಇನ್ನಾದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ವೇದಿಕೆ ತಾಲ್ಲೂಕು ಅಧ್ಯಕ್ಷ ರಮೇಶ್, ಆರ್.ಎಸ್.ಭಾಸ್ಕರ್, ಧರಣಿ, ಎ.ಎಸ್.ಶರತ್, ಎಸ್.ಕೆ.ಪರಮೇಶ್, ಗಗನ್ ಮತ್ತಿತರರಿದ್ದರು.

# ಸರ್ವೆ ಅಧಿಕಾರಿಗಳ ವಾಪಸ್ ಕಳಿಸಿದ ಗ್ರಾಮಸ್ಥರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ದಶಕಗಳಿಂದ ಸ್ವಾಧೀನದಲ್ಲಿದ್ದ ಕಾಫಿ ತೋಟ ಹಾಗೂ ಗ್ರಾಮ ಠಾಣಾ ಜಾಗ ಸರ್ವೆಗೆ ಬಂದಿದ್ದ ಅಧಿಕಾರಿಗಳನ್ನು ಗ್ರಾಮಸ್ಥರು ವಾಪಸ್ ಕಳುಹಿಸಿರುವ ಘಟನೆ ತಾಲ್ಲೂಕಿನ ಬೆಳಗೋಡು ಗ್ರಾಮದಲ್ಲಿ ನಡೆದಿದೆ.

ಸರ್ವೆಗೆ ಮುಂದಾದ ಕಂದಾಯ ಇಲಾಖೆ ಅಧಿಕಾರಿಗಳನ್ನು ಸ್ಥಳೀಯರು ತಡೆದ ಹಿನ್ನೆಲೆಯಲ್ಲಿ ಸರ್ವೆ ಕಾರ್ಯ ಅರ್ಧಕ್ಕೆ ಮೊಟಕುಗೊಂಡಿದ್ದು, ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು.

ಬೆಳಗೋಡು ಸರ್ವೆ ನಂ. 238 ರಲ್ಲಿ 3 ಗುಂಟೆ, ಸರ್ವೆ ನಂ. 239 ರಲ್ಲಿ 1 ಎಕರೆ 1 ಗುಂಟೆ ಹಾಗು ಸರ್ವೆ ನಂ. 224 ರಲ್ಲಿ 6 ಗುಂಟೆ ಕಾಫಿ ತೋಟದ ಜಮೀನು ನಮ್ಮ ಹೆಸರಿನಲ್ಲಿದ್ದು, ಕಳೆದ 70 ವರ್ಷಗಳಿಂದ ಸ್ವಾಧೀನದಲ್ಲಿದೆ. ನಾವು ಸ್ಥಳದಲ್ಲಿ ಇಲ್ಲದ ಸಮಯ ನೋಡಿ ಗ್ರಾಮ ಪಂಚಾಯಿತಿಯವರು ಕಾಫಿ, ಸಿಲ್ವರ್, ಅಡಿಕೆ ಹಾಗೂ ತೆಂಗಿನ ಮರಗಳನ್ನು ಏಕಾಏಕಿ ಕಡಿದು ಹಾಕಿದ್ದಾರೆಂದು ಆರೋಪಿಸಿದರು.

ಹದ್ದುಬಸ್ತು ಗುರುತಿಸಿಕೊಡಲು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದರೂ ವಿಳಂಬ ಮಾಡಲಾಯಿತು. ಅಂತಿಮವಾಗಿ ನ್ಯಾಯಾಲಯದ ಮೊರೆ ಹೋದಾಗ ಸಕಲೇಶಪುರ ಸಿವಿಲ್ ನ್ಯಾಯಾಲಯವು ಜಮೀನಿನಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಯಾಜ್ಞೆ ನೀಡಿದೆ ಎಂದು ಹೇಳಿದ್ದಾರೆ. ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ನಮಗೆ ರಕ್ಷಣೆ ನೀಡಬೇಕು ಎಂದು ಬೆಂಗಳೂರು ನೆಲಮಂಗಲ ನಿವಾಸಿ ಹೆಚ್.ಎಸ್. ಪಾರ್ವತಮ್ಮ ಅವರ ಪರವಾಗಿ ಕುಟುಂಬದವರು ಗಂಭೀರ ಆರೋಪ ಮಾಡಿದ್ದಾರೆ.



### ದಲಿತ ಮುಖಂಡರ ಆಕ್ಷೇಪ

ದೂರುದಾರರ ಮನವಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಸರ್ವೆ ಇಲಾಖಾ ಅಧಿಕಾರಿಗಳು ಆಗಮಿಸಿದಾಗ ಸ್ಥಳೀಯ ದಲಿತ ಮುಖಂಡರು ಹಾಗೂ ಗ್ರಾಮಸ್ಥರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದು ಗ್ರಾಮಠಾಣಾ ಜಾಗವಾಗಿದ್ದು, ಈಗಾಗಲೇ ಇಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ.

ಇದೇ ಜಾಗದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಭೂಮಿ ಕಾಯ್ದಿರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಈ ಭೂಮಿ ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಅಂಬೇಡ್ಕರ್ ಭವನಕ್ಕೆ ಅತ್ಯಗತ್ಯವಾಗಿದೆ. ಸ್ಥಳೀಯರಿಗೆ ಮಾಹಿತಿ ನೀಡದೆ ದಾಖಲೆಗಳನ್ನು ಪರಿಶೀಲಿಸದೆ ಏಕಾಏಕಿ ಸರ್ವೆ ನಡೆಸುವುದು ಸರಿಯಲ್ಲ ಎಂದು ಪಟ್ಟುಹಿಡಿದರು. ಸ್ಥಳೀಯರ ವಿರೋಧದ ಹಿನ್ನಲೆಯಲ್ಲಿ ಸರ್ವೆ ಅಧಿಕಾರಿಗಳು ಅಳತೆ ಮಾಡದೆ ವಾಪಾಸ್ಸಾದರು.

### ಉನ್ನತ ಅಧಿಕಾರಿಗಳ ಭೇಟಿಗೆ ಆಗ್ರಹ

ಒಂದು ಕಡೆ ದೂರುದಾರರು ಇದು ತಮ್ಮ ಹಕ್ಕಿನ ಪಟ್ಟಾ ಜಮೀನು ಎಂದು ದಾಖಲೆಗಳನ್ನು ಮುಂದಿಡುತ್ತಿದ್ದರೆ, ಮತ್ತೊಂದೆಡೆ ಇದು ಗ್ರಾಮಠಾಣಾ ಜಾಗ ಎಂದು ಸ್ಥಳೀಯರು ಪ್ರತಿಪಾದಿಸುತ್ತಿದ್ದಾರೆ.

ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಖುದ್ದು ಭೇಟಿ ನೀಡಿ, ಉಭಯ ಬಣಗಳ ಸಮ್ಮುಖದಲ್ಲಿ ಮೂಲ ಕಾಗದಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

ಇಲ್ಲವಾದರೆ ಗ್ರಾಮಸ್ಥರ ನಡುವೆ ಪರಸ್ಪರ ಜಗಳ-ಘರ್ಷಣೆಗಳು ಸಂಭವಿಸುವ ಸಾಧ್ಯತೆಯಿದ್ದು, ಜಿಲ್ಲಾಡಳಿತ ತಕ್ಷಣವೇ ಮಧ್ಯಪ್ರವೇಶಿಸಿ ಶಾಂತಿ ಕಾಪಾಡಬೇಕಾಗಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಡಿಜಿಟಲ್ ಬ್ಯಾಂಕಿಂಗ್ ಯುಗದಲ್ಲಿ ಜಾಗರೂಕತೆ ಅತ್ಯಗತ್ಯ:ಸೋನಾಲಿ ದಾಸ್




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಆರ್‌ಬಿಐ ನಿಯಂತ್ರಿತ ಸಂಸ್ಥೆಗಳು ಒದಗಿಸುವ ಹಣಕಾಸು ಸೇವೆಗಳ ಗ್ರಾಹಕರ ಹಕ್ಕುಗಳು ಮತ್ತು ರಕ್ಷಣೆಯ ಬಗ್ಗೆ ಅರಿವು ಮೂಡಿಸುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ ಕರ್ತವ್ಯವಾಗಿದ್ದು, ಡಿಜಿಟಲ್ ಬ್ಯಾಂಕಿಂಗ್ ಯುಗದಲ್ಲಿ ಜಾಗರೂಕತೆ ಅತ್ಯಗತ್ಯ ಎಂದು ಸಿಜಿಎಂ ಮತ್ತು ಅರ್‌ಬಿಐ ಓಂಬುಡ್ಸ್‌ಮನ್ ಸೋನಾಲಿ ದಾಸ್ ಅವರು ತಿಳಿಸಿದ್ದಾರೆ.

ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್. ಬಿ. ಐ) ನಿಯಂತ್ರಣಕ್ಕೊಳಪಟ್ಟ ಇತರ ಸಂಸ್ಥೆಗಳು ಗ್ರಾಹಕರಲ್ಲಿ ಅರಿವು ಮೂಡಿಸಲು ಆರ್‌ಬಿಐ ಓಂಬುಡ್ಸ್‌ಮನ್ ಕಚೇರಿ, ಬೆಂಗಳೂರು ವತಿಯಿಂದ ಸೆಪ್ಟೆಂಬರ್ 24 ರಂದು ಹಾಸನ ನಗರದ ಹಾಸನಾಂಭ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಹಣಕಾಸಿನ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಗ್ರಾಹಕರ ವಿಶ್ವಾಸದ ಪ್ರಾಮುಖ್ಯತೆಯನ್ನು ಅವರು ಒತ್ತಿ ಹೇಳಿದರು. ಆರ್‌ಬಿಐ-ನಿಯಂತ್ರಿತ ಸಂಸ್ಥೆಗಳ ವಿರುದ್ಧದ ಬಗೆಹರಿಯದ ಕುಂದುಕೊರತೆಗಳನ್ನು ಉಚಿತವಾಗಿ, ತ್ವರಿತವಾಗಿ ಮತ್ತು ನ್ಯಾಯಯುತವಾಗಿ ಪರಿಹರಿಸಿಕೊಳ್ಳಲು ಗ್ರಾಹಕರು ಆರ್‌ಬಿಐ ಓಂಬುಡ್ಸ್‌ಮನ್ ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-26

1905: ಭೌತಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೈನ್ ವಿಶೇಷ ಸಾಪೇಕ್ಷತಾ ಸಿದ್ಧಾಂತಕ್ಕೆ ಸಂಬಂಧಿಸಿದ ಮಹತ್ವದ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದರು.

1914: ಅಮೆರಿಕದಲ್ಲಿ ಫೆಡರಲ್ ಟ್ರೇಡ್ ಕಮಿಷನ್ ಸ್ಥಾಪನೆಗೆ ಕಾನೂನು ಜಾರಿಗೆ ಬಂತು.

1917: ಪ್ರಥಮ ವಿಶ್ವಯುದ್ಧದ ಪಾಲಿಗನ್ ವುಡ್ ಕದನ ಆರಂಭವಾಯಿತು.

1950: ಕೊರಿಯಾ ಯುದ್ಧದ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಪಡೆಗಳು ಸಿಯೋಲ್ ನಗರವನ್ನು ಮರು ವಶಪಡಿಸಿಕೊಂಡವು.

1960: ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿಗಳಾದ ಜಾನ್ ಎಫ್. ಕೆನಡಿ ಮತ್ತು ರಿಚರ್ಡ್ ನಿಕ್ಸನ್ ನಡುವಿನ ಮೊದಲ ದೂರದರ್ಶನದ ಅಧ್ಯಕ್ಷೀಯ ಚರ್ಚೆ ನಡೆಯಿತು.

1973: ಕಾನ್‌ಕೋರ್ಡ್ ಶಬ್ದಾತೀತ ಪ್ರಯಾಣಿಕ ವಿಮಾನ ಅಟ್ಲಾಂಟಿಕ್ ಸಾಗರವನ್ನು ತಡೆರಹಿತವಾಗಿ ದಾಖಲೆಯ ಸಮಯದಲ್ಲಿ ದಾಟಿತು.

1983: ಸೋವಿಯತ್ ಸೇನಾಧಿಕಾರಿ ಸ್ಟಾನಿಸ್ಲಾವ್ ಪೆಟ್ರೋವ್ ಕಂಪ್ಯೂಟರ್‌ನಿಂದ ಬಂದ ಅಮೆರಿಕದ ಕ್ಷಿಪಣಿ ದಾಳಿಯ ಎಚ್ಚರಿಕೆ ತಪ್ಪು ಎಂದು ಗುರುತಿಸಿದರು. ಈ ಘಟನೆ ಪರಮಾಣು ಸಂಘರ್ಷದ ಅಪಾಯವನ್ನು ತಪ್ಪಿಸುವಲ್ಲಿ ಮಹತ್ವದ್ದೆಂದು ಪರಿಗಣಿಸಲಾಗಿದೆ.

1984: ಬ್ರಿಟನ್ ಮತ್ತು ಚೀನಾ ನಡುವೆ ಹಾಂಗ್‌ಕಾಂಗ್‌ನ ಸಾರ್ವಭೌಮತ್ವವನ್ನು 1997ರಲ್ಲಿ ಚೀನಾಕ್ಕೆ ವರ್ಗಾಯಿಸುವ ಒಪ್ಪಂದಕ್ಕೆ ಒಪ್ಪಿಗೆ ದೊರೆಯಿತು.

### ಜನನ

1820: ಸಮಾಜ ಸುಧಾರಕ, ಶಿಕ್ಷಣತಜ್ಞ ಹಾಗೂ ವಿಧವಾ ಪುನರ್ವಿವಾಹ ಮತ್ತು ಮಹಿಳಾ ಶಿಕ್ಷಣದ ಪರ ಹೋರಾಡಿದ ಈಶ್ವರಚಂದ್ರ ವಿದ್ಯಾಸಾಗರ

1849: ಇವಾನ್ ಪಾವ್ಲೋವ್

1981 : ಸೆರೆನಾ ವಿಲಿಯಮ್ಸ್

### ನಿಧನ

1820: ಡ್ಯಾನಿಯಲ್ ಬೂನ್

1945: ಬೇಲಾ ಬಾರ್ಟೋಕ್

2008: ಪಾಲ್ ನ್ಯೂಮನ್

# ಮಹಿಳೆ ಕೊರಳಿಂದ ಚಿನ್ನದ ಸರ ದೋಚಿ ಪರಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮಹಿಳೆಯ ಕೊರಳಿಂದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಪಟ್ಟಣದ ವೈಕುಂಠ ಬೀದಿಯಲ್ಲಿ ನಡೆದಿದೆ.

ನಿವಾಸಿ ಶಾರದಾಂಬ ಅವರು ತಮ್ಮ ಮನೆ ಮುಂದೆ ಎಂದಿನಂತೆ ರಂಗೋಲಿ ಹಾಕುತ್ತಿದ್ದಾಗ ಬಂದ ಅಪರಿಚಿತ ವ್ಯಕ್ತಿಯೊಬ್ಬ ಬಾಡಿಗೆಗೆ ರೂಂ ಕೇಳಿದ್ದಾನೆ. ಶಾರದಾಂಬ ಅವರು ಇಲ್ಲಿ ರೂಂಗಳಿಲ್ಲವೆಂದು ಹೇಳುತ್ತಿದ್ದಂತೆ ಕೊರಳಿಗೆ ಕೈ ಹಾಕಿದ ಅಪರಿಚಿತ 30 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಮಹಿಳೆ ಜೋರಾಗಿ ಕೂಗಿ ಸರದ ಅರ್ಧಭಾಗ ಹಿಡಿದುಕೊಂಡಿದ್ದರಿಂದ ಸುಮಾರು 10 ಗ್ರಾಂನಷ್ಟು ಸರವನ್ನು ಆತ ಕಿತ್ತುಕೊಂಡು ಹತ್ತಿರದಲ್ಲೇ ನಿಂತಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕರ್ನಾಟಕದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು: ಪೊಲೀಸರ ಅಲರ್ಟ್

1ನೇ ಪುಟದಿಂದ ....

ನಿನ್ನೆ (ಗುರುವಾರ) ಮಧ್ಯಾಹ್ನ ಸಂತೆ ಮರೂರು ವೃತ್ತದಲ್ಲಿ ಸಲಾಮಿನ್‌ನನ್ನು ಬಂಧಿಸಿ ಕರೆದೊಯ್ದಿದೆ. ಈ ಕಾರ್ಯಾಚರಣೆಯ ಬಳಿಕ ಸ್ಥಳೀಯ ಅರಕಲಗೂಡು ಪೊಲೀಸರಿಗೂ ಮಾಹಿತಿಯನ್ನು ರವಾನಿಸಲಾಗಿದೆ.

ಈ ಪ್ರಕರಣದ ಕುರಿತು ಪ್ರತಿಕ್ರಿಯಿಸಿರುವ ಚಿಕ್ಕಬಳ್ಳಾಪುರ ಎಸ್‌ಪಿ ಪದ್ಮಿನಿ ಸಾಹೂ ಅವರು, ಬಂಧಿತರಿಬ್ಬರಿಗೂ ಯಾವುದೇ ರೀತಿಯ ಭಯೋತ್ಪಾದನಾ ಹಿನ್ನೆಲೆ ಇರುವುದು ಸದ್ಯದ ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿಲ್ಲ. ಹೆಚ್ಚಿನ ವಿಚಾರಣೆಗಾಗಿ ಇಬ್ಬರನ್ನೂ ಪೊಲೀಸ್ ಕಸ್ಟಡಿಗೆ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಪ್ರಕರಣದ ಬೆನ್ನು ಬಿದ್ದಿರುವ ಪೊಲೀಸರು, ಬಂಧಿತರ ಹಿನ್ನೆಲೆ, ಅವರ ಆರ್ಥಿಕ ವ್ಯವಹಾರಗಳು, ರಾಜ್ಯದಲ್ಲಿರುವ ಇತರೆ ಸಂಪರ್ಕಗಳು ಹಾಗೂ ಈ ಟೆಲಿಗ್ರಾಂ ಜಾಲದಲ್ಲಿ ಇನ್ನೂ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬ ಆಯಾಮಗಳಲ್ಲಿ ತೀವ್ರ ತನಿಖೆ ಮುಂದುವರಿಸಿದ್ದಾರೆ.

# ಸ್ಕೂಲಿಗೇ ಇಟ್ಟ ಉಲ್ಲನ್ ಬಾಂಬು!!!-2

**- ಧನಂಜಯ ಜಿವಾಳ**

ಈ ಸಂತಮ್ಮಣ್ಣ ಚಿಕ್ಕಮಗಳೂರಿನ ಬೋರ್ಡಿಂಗ್ ಸ್ಕೂಲು ಬಿಟ್ಟು ಬಂದುದಕ್ಕೆ ಮತ್ತೂ ಒಂದು ಕಾರಣವಿದೆ. ಆಗ ಆತ ಎಂಟನೇ ತರಗತಿ. ಅದು ದೀಪಾವಳಿಯ ಕಾಲ. ಪಟಾಕಿಗಳಲ್ಲಿ ಲಕ್ಷ್ಮಿ ಪಟಾಕಿ , ಮೂಲೆ ಪಟಾಕಿ, ಉಲ್ಲನ್ ಬಾಂಬ್. ಹೀಗೆ ಕೆಲ ಹೈಎಂಡ್ ಸದ್ದು ಮಾಡುವ ಪಟಾಕಿಗಳನ್ನು ದೊಡ್ಡ ಹುಡುಗರು ಮಾತ್ರ ಹೊಡೆಯುತ್ತಿದ್ದರು. ಪೇಪರಿನಲ್ಲಿ ಸುತ್ತಿ ಲಕ್ಷ್ಮಿ ದೇವರ ಬಣ್ಣದ ಚಿತ್ರ ಅಂಟಿಸಿರುತಿದ್ದ ವಿಪರೀತ ಸದ್ದು ಹೊರಡಿಸುತ್ತಿದ್ದ ಲಕ್ಷ್ಮಿ ಪಟಾಕಿಗೆ ಸವಾಲೊಡ್ಡಲು ಬಂದಿದ್ದೇ ತೆಂಗಿನ ಗರಿಯಿಂದ ತ್ರಿಕೋನಾಕೃತಿಯಲ್ಲಿ ಮಡಿಸಿ ಮಾಡಿ ಸರಳವಾದ ಪ್ಯಾಕಿಂಗ್‌ನಲ್ಲಿ ಬರುತ್ತಿದ್ದ ಮೂಲೆ ಪಟಾಕಿ, ಯೂಸರ್ ಫ್ರೆಂಡ್ಲಿಯಾಗಿದ್ದ ಈ ಮೂಲೆ ಪಟಾಕಿ ಮೂರು ವಿಭಿನ್ನ ಗಾತ್ರಗಳಲ್ಲಿ ಮಾರಾಟವಾಗುತಿತ್ತು. ಇವೆರಡಕ್ಕೂ ಸೆಡ್ಡು ಹೊಡೆಯಲು ಬಂದದ್ದೇ ಹಸಿರು ಉಲ್ಲನ್ ಸುತ್ತಿದ್ದ ಗರ್ನಾಲುಗಳು. ಅಂಟುಹಾಕಿದ ಹಸಿರು ಉಲ್ಲನ್ ಅನ್ನು ಬಲವಾಗಿ ಸುತ್ತಿ ಅದರ ಮೇಲೆ ಬ್ಯಾಂಡ್ ಅಂಟಿಸಿದ್ದ ಈ ಉಲ್ಲನ್ ಬಾಂಬ್ ಅವತ್ತಿನ ಟ್ರೆಂಡ್. ಆ ಪಟಾಕಿಯನ್ನು ಉಢಾಯಿಸಿದವರು ನಿಜವಾಗಿಯೂ ತಾಕತ್‌ವಾಲಾಗಳು ಎಂದು ಪರಿಗಣಿಸಲ್ಪಡುತಿದ್ದರು.

ಬ್ರಿಟಿಷರ ಕಾಲದಲ್ಲೇ ನಿರ್ಮಾಣವಾಗಿದ್ದ ಆ ಹೈಸ್ಕೂಲು ಇನ್ನೂ ಐವತ್ತು ವರ್ಷ ಮಲೆನಾಡಿನ ಆ ಭೀಷಣ ಮಳೆ, ಗಾಳಿ, ಬಿಸಿಲಿನ ಹೊಡೆತವನ್ನು ತಾಳಿಕೊಂಡು ನಿಲ್ಲುತಿದ್ದುದರಲ್ಲಿ ಯಾವುದೇ ಅನುಮಾನವಿರಲಿಲ್ಲ. ಸಿಮೆಂಟ್ ಇನ್ನೂ ಪ್ರವರ್ಧಮಾನಕ್ಕೆ ಬಾರದಿದ್ದ ಆ ಕಾಲದಲ್ಲಿ ಮರಳು, ಸುಣ್ಣ, ಬೆಲ್ಲ ಹಾಕಿ ಅರೆದು ಮಾಡಿದ ಗಾರೆ, ಠಣ್ ಠಣ್ ಸದ್ದು ಮಾಡುವ ಸಣ್ಣಗಾತ್ರದ ಸುಟ್ಟ ಇಟ್ಟಿಗೆಗಳನ್ನು ಬಳಸಿ ಕಟ್ಟಿದ ಆ ಶಾಲಾ ಕಟ್ಟಡದ ಗೋಡೆಯಲ್ಲಿ ಅದು ಹೇಗೋ ಏನೋ ಒಂದು ಇಟ್ಟಿಗೆ ಲೂಸ್ ಆಗಿತ್ತು. ಕೈವಾರದ ಮುಳ್ಳಿಂದ ಇಟ್ಟಿಗೆಯ ಅಂಚನ್ನಷ್ಟೇ ಗೀರಿಗೀರಿ ಅಲ್ಲೊಂದು ತೊಳ್ಳನ್ನು ಸೃಷ್ಟಿಸುವ ಪ್ರಯತ್ನವಾಗಿತ್ತು. ಸಂತಮ್ಮಣ್ಣ, ನಾರಾಯಣ ಶೆಟ್ಟಿ, ಸುರೇಶ ಈ ಮೂವರೂ ಇಡೀ ಶಾಲೆಗೆ ನೊಟೋರಿಯಸ್ ವಿದ್ಯಾರ್ಥಿಗಳು. ಬೆಳಿಗ್ಗೆ ಎಂಟರಿಂದ ಹನ್ನೆರಡರವರೆಗೂ ಪೀಯೂಸಿಯವರಿಗೆ ತರಗತಿ, ಹನ್ನೆರಡರ ನಂತರ ಅದೇ ಕಟ್ಟಡದಲ್ಲಿ ಹೈಸ್ಕೂಲು ನಡೆಯುತಿತ್ತು.



ಹನ್ನೊಂದುವರೆಗೇ ಶಾಲೆಗೆ ಬಂದ ಈ ಮೂವರ ಪಟಾಲಾಂ ಹಾಗೂ ಹೀಗೂ ಮಾಡಿ ಸಡಿಲವಾಗಿದ್ದ ಆ ಇಟ್ಟಿಗೆಯನ್ನು ಹೊರತೆಗೆದು ಅದರೊಳಗೆ ಒಂದು ದೊಡ್ಡ ಗಾತ್ರದ ಉಲ್ಲನ್ ಬಾಂಬನ್ನು ಉದ್ದ ಬತ್ತಿ ಮಾಡಿ ಇರಿಸಿ ಮತ್ತದೇ ಇಟ್ಟಿಗೆಯನ್ನು ಅದೇ ಜಾಗಕ್ಕೆ ತೂರಿಸಿ ಇರಿಸಿದ್ದಾರೆ. ಪ್ರೇಯರ್‌ಗೆ ಬೆಲ್ ಆಯಿತು, ಎಲ್ಲರನ್ನೂ ಹೊರಗೆ ಕಳಿಸಿದ ಸುರೇಶ ಎರಡು ಅಡಿ ಉದ್ದದ ಬತ್ತಿಗೆ ಉರಿಯುತಿದ್ದ ಊದುಬತ್ತಿಯನ್ನು ಹೊಂದಿಸಿ ತಾನೂ ಪ್ರೇಯರಿಗೆಂದು ಮೈದಾನದಲ್ಲಿ ಸೇರಿಕೊಂಡಿದ್ದಾನೆ. ''ಸ್ವಾಮಿದೇವನೆ ಲೋಕಪಾಲನೆ'' ಆಯಿತು. 'ಜಯ ಭಾರತ ಜನನಿಯ ತನುಜಾತೆ'ಯೂ ಆಯಿತು. ನಾರಾಯಣ, ಸಂತಮ್ಮಣ್ಣ ಇಬ್ಬರೂ ತಿರುತಿರುಗಿ ಸುರೇಶನ ಕಡೆಗೆ ನೋಡಿ ಹುಬ್ಬು ಹಾರಿಸಿ ಏನಾಯ್ತೆಂದು ಸಂಜ್ಞೆ ಮಾಡಿದರು. ಸುರೇಶನೂ ಬಾಂಬಿಟ್ಟದ್ದ ಕೊಠಡಿಯೆಡೆಗೆ ವಾರೆಗಣ್ಣಲ್ಲಿ ನೋಡುತ್ತಾ ಪೀಟೀ ಮಾಸ್ತ್ರು ಕೆಎಮ್ಮಾರ್ ರವರ ವಿಷಲ್ಲಿಗೆ ಜೋಡಿಸಿದ್ದ ವೈಯರಿನ ಹೆಣಿಗೆಯ ಚಾಟಿಯಿಂದ ಬರೆ ಬೀಳುವಂತೆ ಹಿಂಗಾಲ ಮೀನಖಂಡದ ಮೇಲೆ ಪೆಟ್ಟನ್ನೂ ತಿಂದ. ಜನಗಣಮನ ಶುರೂ ಆಯ್ತು...... ಗುಜರಾತ ಮರಾಠಾ........ ಎನ್ನುತ್ತಿದ್ದಂತೆ ''ಗುಢ್ಢಾರ್!!'' ಎಂದು ಇಡೀ ಕಟ್ಟಡವೇ ಕಂಪಿಸುವಂತೆ ಸಿಡೀತು ನೋಡಿ ಉಲ್ಲನ್ ಬಾಂಬ್! ಪ್ರಾರ್ಥನೆಗೆ ನಿಂತಿದ್ದ ಮುನ್ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಇಪ್ಪತ್ತಕ್ಕೂ ಮೀರಿದ ಶಿಕ್ಷಕವರ್ಗ ಸ್ಥಂಭೀಭೂತರಾದರು. ರಾಷ್ಟ್ರಗೀತೆ ತಾನೇ ತಾನಾಗಿ ನಿಂತುಹೋಯಿತು. ಈ ಮೂವರು ಮಾತ್ರ ಏನೂ ಆಗೇ ಇಲ್ಲವೆಂಬಂತೆ 'ವಿಂಧ್ಯ ಹಿಮಾಚಲ ಯಮುನಾ ಗಂಗಾ........ 'ಎಂದು ಮುಂದುವರೆಸಿಯೇ ಇದ್ದರು. ಕ್ರಾಫ್ಟ್ ಟೀಚರ್ ಬೀಜೀಜೆ, ಕನ್ನಡ ಮೇಷ್ಟ್ರು ಕೇವಿಆರ್, ಇನ್ನೊರ್ವ ಪೀಟೀ ಮೇಷ್ಟ್ರು ಜೀಹೆಚ್‌ಎಂ ದಡಬಡಾಯಿಸಿ ಹೋಗಿ ನೋಡ್ತಾರೆ, ಇಟ್ಟಿಗೆ ಹಾರಿ ಎದುರಿನ ಡೆಸ್ಕಿನಡಿ ಬಿದ್ದಿದೆ, ಬಾಂಬ್ ಗೂಡಿನ ಸುತ್ತಲಿನ ಗಾರೆ ಸೀಳಾಗಿದೆ. ಯೂಷುಯಲ್ ಸಸ್ಪೆಕ್ಟ್ಸ್ ಈ ಮೂವರನ್ನೂ ಹೊರಹಾಕಿದ ಹೈಸ್ಕೂಲು ದೆಬ್ರಳ್ಳಿ ದನಾ ಕಾಯುವವರು ಗುಂಪಿಗೆ ಸಂತಮ್ಮಣ್ಣನೆಂಬ ಹೊಸಾ ಆಸಾಮಿಯನ್ನ ಸೇರಿಸಿತ್ತು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248